

ಮಾರುಕಟ್ಟೆ ಪ್ರವೇಶಿಸುತ್ತಿದೆ. ಮುಂದೆ ಸಿಗುವುದೇ ಇಲ್ಲವೇನೋ ಎಂಬ ಧಾವಂತದಿಂದ ಜನ ಒಂದರ ಜಾಗದಲ್ಲಿ ನಾಲ್ಕನ್ನು ಖರೀದಿಸುತ್ತಿದ್ದಾರೆ. ಮೆಕೆನ್ಸೀ ಗ್ಲೋಬಲ್ ಕಂಪನಿಯ 'ಸ್ಟೇಟ್ ಆಫ್ ಫ್ಯಾಷನ್ 2020' ವರದಿಯ ಪ್ರಕಾರ ಜವಳಿ ಉದ್ಯಮದ ನಡೆಯೇ ಪರಿಸರ ವಿರೋಧಿಯಾದುದು ಮತ್ತು ಅದರಿಂದ ಹೊಮ್ಮುವ ಹಸಿರುಮನೆ ಅನಿಲ ಹಾಗೂ ಹತ್ತಿ ಬೆಳೆಯಲು ಬಳಸುವ ಅತಿಯಾದ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ತಡೆಯುವುದು ತೀರಾ ಕಷ್ಟದ ಕೆಲಸ.

## ನೀರಿನ ಅಪೋಷಣೆಯ ಫಾಸ್ಟ್ ಫ್ಯಾಷನ್

2000 ಇಸವಿಯ ನಂತರ ಮಾರುಕಟ್ಟೆ ಪ್ರವೇಶಿಸಿದ ಫ್ಯಾಷನ್ ಟ್ರೆಂಡನ್ನು 'ಫಾಸ್ಟ್ ಫ್ಯಾಷನ್' ಎಂದು ಕರೆಯಲಾಗುತ್ತಿದೆ. ಇಡೀ ವಸ್ತ್ರೋದ್ಯಮ ನೀರಿನ ಮೂಲಗಳನ್ನು ನಂಬಿಕೊಂಡೇ ಬದುಕುತ್ತದೆ. ಲೆಕ್ಕಾಚಾರದ ಪ್ರಕಾರ ಪ್ರತಿ ವರ್ಷ ಒಂದೂವರೆ ಶತಕೋಟಿ ಲೀಟರ್ ನೀರು ಉಡುಪು ಉದ್ಯಮಕ್ಕೆ ಬಳಕೆಯಾಗುತ್ತಿದೆ. ಒಂದು ಕೇಜಿ ಹತ್ತಿ ಬೆಳೆಯಲು 20 ಸಾವಿರ ಲೀಟರ್ ನೀರು ಖರ್ಚಾಗುತ್ತದೆ. ಒಂದು ಕಾಟನ್ ಶರ್ಟ್ ತಯಾರಿಸಲು 700 ಗ್ಯಾಲನ್ ನೀರು ಖರ್ಚಾಗುತ್ತದೆ. ಸಾಮಾನ್ಯ ಮನುಷ್ಯನೊಬ್ಬ ದಿನಕ್ಕೆ ಎರಡು ಲೀಟರಿನಷ್ಟು ಲೆಕ್ಕದಲ್ಲಿ ಮೂರು ವರ್ಷಗಳವರೆಗೆ ಕುಡಿಯಬಹುದಾದ ನೀರಿಗೆ, ಅಂಗಿಯೊಂದು ಹತ್ತಿಯ ಉತ್ಪಾದನೆಯಿಂದ ಹಿಡಿದು ಅದು ಉಡುಪಿನ ರೂಪ ತಳೆಯುವವರೆಗೂ ಬಳಕೆಯಾಗುವ ಶುದ್ಧ ನೀರಿನ ಪ್ರಮಾಣ ಸಮ. ಒಂದು ಜೀನ್ಸ್ ಪ್ಯಾಂಟ್ ತಯಾರಿಸಲು 2000 ಗ್ಯಾಲನ್ ನೀರು ಬಳಕೆಯಾಗುತ್ತದೆ. ಇದು ವ್ಯಕ್ತಿಯೊಬ್ಬ ದಿನಕ್ಕೆ ಎಂಟು ಲೋಟಗಳಂತೆ ಕನಿಷ್ಠ ಒಂಬತ್ತು ವರ್ಷ ಕುಡಿಯುವ ನೀರಿಗೆ ಸಮ. ಒಂದು ಟನ್ ಬಟ್ಟೆಗೆ ಬಣ್ಣ ಹಾಕಲು 200 ಟನ್‌ನಷ್ಟು ಸಿಹಿ ನೀರು ವ್ಯಯವಾಗುತ್ತದೆ. 2 ಲಕ್ಷ ಟನ್‌ಗಳಷ್ಟು ತೊಳೆದ ಬಣ್ಣ ನೀರಿಗೆ ಬೆರೆಯುತ್ತದೆ. ಬಟ್ಟೆಯನ್ನು ಸಂಸ್ಕರಿಸಿದ ನಂತರ ಅದರಲ್ಲಿನ ಸೀಸ, ಪಾದರಸ, ಆರ್ಸೆನಿಕ್‌ನಂಥ ಭಾರೀ ವಿಷಕಾರಕಗಳು ನದಿಗೆ ಸೇರ್ಪಡೆಗೊಳ್ಳುತ್ತವೆ. 5 ಲಕ್ಷ ಟನ್‌ನಷ್ಟು ಮೈಕ್ರೋ ಫೈಬರ್ ಸಾಗರ ಸೇರುತ್ತದೆ. ಇದು 50 ಶತಕೋಟಿ ಪ್ಲಾಸ್ಟಿಕ್ ಬಾಟಲ್‌ಗಳಿಗೆ ಸಮ. ಇದರಲ್ಲಿ ಶೇ 60ರಷ್ಟು ಬಟ್ಟೆಗಳಲ್ಲಿ ಪಾಲಿಯೆಸ್ಟರ್ ಇದ್ದು, ಕಾಟನ್ ಬಟ್ಟೆ ತಯಾರಿಸುವಾಗ ಬಿಡುಗಡೆಗೊಳ್ಳುವ ಇಂಗಾಲಕ್ಕಿಂತ ಮೂರು ಪಟ್ಟು ಹೆಚ್ಚು ಇಂಗಾಲ ವಾತಾವರಣಕ್ಕೆ ಹೊಮ್ಮುತ್ತದೆ.

'ಯುನೈಟೆಡ್ ನೇಶನ್ಸ್ ಎನ್ವಿರಾನ್‌ಮೆಂಟ್ ಪ್ರೋಗ್ರಾಂ' ಪ್ರಕಾರ ಒಂದು ಜೀನ್ಸ್ ಪ್ಯಾಂಟ್ ತಯಾರಿಸಲು ಸರಿ ಸುಮಾರು 3780 ಲೀಟರ್ ನೀರು ಖರ್ಚಾಗುತ್ತದಂತೆ! ಅದಕ್ಕೆ ಬೇಕಾಗುವ ಹತ್ತಿಯನ್ನು ಬೆಳೆಯುವುದರಿಂದ ಹಿಡಿದು ಉಡುಪು ತಯಾರಿಸಿ ಅಂಗಡಿಯ ಮಳಿಗೆ ತಲುಪುವವರೆಗೆ ಬರೋಬ್ಬರಿ 34 ಕೇಜಿ ತೂಕದಷ್ಟು ಇಂಗಾಲದ ಡೈ ಆಕ್ಸೈಡ್ ವಾತಾವರಣಕ್ಕೆ ಸೇರಿರುತ್ತದೆ. ಈ ಉದ್ಯಮದಲ್ಲಿ ವಾರ್ಷಿಕ ಬಳಕೆಯಾಗುವ 93